ಸರ್ಕಾರಿ I.T.I. ಪ್ರಾರಂಭಿಸುವ ಬಗ್ಗೆ

551 (606) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಎಷ್ಟು ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರಗಳಿವೆ?

ಆ) ಭಾಲ್ಕಿ ತಾಲ್ಲೂಕಿನಲ್ಲಿ ಹೊಸದಾಗಿ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರ ಪ್ರಾರಂಭಿಸಲು ಮನವಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) 2012–13ನೇ ಸಾಲಿಗೆ ಭಾಲ್ಕಿ ತಾಲ್ಲೂಕಿಗೆ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರ ಸ್ಥಾಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು) :

ಅ) ಬೀದರ್ ಜಿಲ್ಲೆಯಲ್ಲಿ 4 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ.

ಆ) ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನಲ್ಲಿ ಹೊಸ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಪ್ರಾರಂಭಿಸುವ ಉದ್ದೇಶ ಸರ್ಕಾರದ ಮಟ್ಟದಲ್ಲಿ ಇರುವುದಿಲ್ಲ.

ಇ) 2012–13ನೇ ಸಾಲಿನಲ್ಲಿ ಅನುದಾನದ ಲಭ್ಯತೆ ಆಧರಿಸಿ ಹಂತಹಂತವಾಗಿ ಅವಶ್ಯಕತೆಯ ಮೇರೆಗೆ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಬಿಡುಗಡೆಯಾದ ಅನುದಾನ

555 (465) ಶ್ರೀ ಗೂಳಿಹಟ್ಟಿ ಡಿ. ಶೇಖರ (ಹೊಸದುರ್ಗ) : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಿಂದ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ಇಲಾಖೆಯಿಂದ ಭಾರಿ ಮತ್ತು ಮಧ್ಯಮ ನೀರಾವರಿಗೆ ಬಿಡುಗಡೆಗೊಳಿಸಿದ ಅನುದಾನ/ಖರ್ಚಾದ ಅನುದಾನವೆಷ್ಟು' ಅದರಲ್ಲಿ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ಎಷ್ಟೆಷ್ಟು ಅನುದಾನ ವಿನಿಯೋಗಿಸಲಾಗಿದೆ; 224 ಕ್ಷೇತ್ರಗಳಿಗೆ ಬಿಡುಗಡೆ

ಗೊಳಿಸಿದ ಅನುದಾನವೆಷ್ಟು; (ವಾರ್ಷಿಕವಾರು ವಿವರ ನೀಡುವುದು); ಎಲ್ಲಾ ಯೋಜನೆಗಳಿಂದ, ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಇತರೆ ಮೂಲಗಳಿಂದ ಬಿಡುಗಡೆಯಾದ ಅನುದಾನವೆಷ್ಟು; (ಪೂರ್ಣ ವಿವರ ನೀಡುವುದು);

ಆ) ಕಳೆದ ಮೂರು ವರ್ಷಗಳಿಂದ ಪ್ರತಿ ವರ್ಷ ಇಲಾಖೆಗೆ ಒದಗಿಸಿದ ಒಟ್ಟು ಅನುದಾನ, ಇದುವರೆವಿಗೂ ಬಿಡುಗಡೆಯಾದ ಅನುದಾನ, ಖರ್ಚಾದ ಅನುದಾನ, ನಿಗದಿಪಡಿಸಿದ ಅನುದಾನದಲ್ಲಿ ಅತಿ ಹೆಚ್ಚಿನ ಅನುದಾನ ಯಾವ ವಿಧಾನಸಭಾ ಕ್ಷೇತ್ರಕ್ಕೆ ಬಿಡುಗಡೆಯಾಗಿದೆ; (ವರ್ಷಾವಾರು ವಿವರ ಒದಗಿಸುವುದು)

ಇ) ಅತಿ ಕಡಿಮೆ ಯಾವ ಕ್ಷೇತ್ರಕ್ಕೆ ಬಿಡುಗಡೆಯಾಗಿದೆ;

ಈ) ಹಾಗಿದ್ದಲ್ಲಿ, ಅನುದಾನ ನಿಗದಿಪಡಿಸುವಲ್ಲಿ/ ಬಿಡುಗಡೆ ಮಾಡುವಲ್ಲಿ ಕ್ಷೇತ್ರವಾರು ತಾರತಮ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ಮತ್ತು ಆ) ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗೆ ಯೋಜನಾವಾರು/ನಿಗಮವಾರು ಅನುದಾನವನ್ನು ಆಯವ್ಯಯದಲ್ಲಿ ಹಂಚಿಕೆ ಮಾಡಲಾಗಿದೆ. ತಾಲ್ಲೂಕು/ಜಿಲ್ಲಾವಾರು ಹಂಚಿಕೆ ಇರುವುದಿಲ್ಲ.

ಕಳೆದ ಮೂರು ವರ್ಷಗಳಲ್ಲಿ ಜಲಸಂಪನ್ಮೂಲ ಇಲಾಖೆಯ 3 ನಿಗಮಗಳ ವ್ಯಾಪ್ತಿಯಲ್ಲಿನ ವಿವಿಧ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗೆ ಬಿಡುಗಡೆಗೊಳಿಸಲಾದ ಆಯವ್ಯಯ ಅನುದಾನ ಹಾಗೂ ವೆಚ್ಚದ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಕೇಂದ್ರ ಸರ್ಕಾರದಿಂದ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗೆ ಬಿಡುಗಡೆಗೊಳಿಸಲಾದ ಅನುದಾನದ ವಿವರಗಳು:

ವಿವರ	2009–10	2010–11	2011–12
ಎಐಬಿಪಿ ಮತ್ತು ಪ್ರಧಾನ ಮಂತ್ರಿಗಳ ವಿಶೇಷ ಪ್ಯಾಕೇಜ್	776.50	532.93	452.23
ಕಾಡಾ	31.70	53.41	53.08
ಒಟ್ಟು	**808.20**	**586.34**	**505.31**

ಇ) ಮತ್ತು ಈ) ಮೇಲಿನಂತೆ ಕಡಿಮೆ ಹಂಚಿಕೆ/ಬಿಡುಗಡೆ ಹಾಗೂ ಕ್ಷೇತ್ರವಾರು ತಾರತಮ್ಯದ ಕುರಿತು ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಗೂಳಿಹಟ್ಟಿ ಶೇಖರ್, ವಿಧಾನ ಸಭಾ ಸದಸ್ಯರು, ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ
468ಕ್ಕೆ ಅನುಬಂಧ

(ರೂ.ಕೋಟಿಗಳಲ್ಲಿ)

ನಿಗಮ/ವಲಯ	2009-10			2010-11			2011-12			ಷರಾ
	ಅನುದಾನ ಹಂಚಿಕೆ	ಅನುದಾನ ಬಿಡುಗಡೆ	ನಿರ್ವಹಿಸಿದ ಕಾಮಗಾರಿ ಮೊತ್ತ	ಅನುದಾನ ಹಂಚಿಕೆ	ಅನುದಾನ ಬಿಡುಗಡೆ	ನಿರ್ವಹಿಸಿದ ಕಾಮಗಾರಿ ಮೊತ್ತ	ಅನುದಾನ ಹಂಚಿಕೆ	ಅನುದಾನ ಬಿಡುಗಡೆ	ನಿರ್ವಹಿಸಿದ ಕಾಮಗಾರಿ ಮೊತ್ತ	
1	2	3	4	5	6	7	8	9	10	11
ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ	876.99	868.15	702.49	1266.75	1077.81	765.96	1880.00	1618.00	821.99	
ಕರ್ನಾಟಕ ನೀರಾವರಿ ನಿಗಮ ನಿಯಮಿತ	1693.00	1527.8	1417.51	2033.55	2033.55	2012.27	2574.16	2450.45	2390.23	
ಕಾವೇರಿ ನೀರಾವರಿ ನಿಗಮ ನಿಯಮಿತ	863.16	807.53	532.34	805.38	805.38	534.32	1233.68	909.07	667.18	
ನಿಗಮೇತರ ವಲಯಗಳು	325.09	312.78	371.84	262.93	125.63	81.53	253.31	95.99	53.62	
ಕಾಡಾ	95.80	87.16	92.82	129.00	117.03	141.69	760.70	193.90	212.39	
ಬಾಕಿ ಬಿಲ್ಲುಗಳು	-	-	192.74	-	-	253	-	-	1036.13	
ಒಟ್ಟು	3854.04	3623.42	3309.74	4497.61	4159.40	3788.77	6701.85	5267.41	5181.54	

(ಸಿ.ಶ್ರೀನಿವಾಸಲು)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-1)
ಜಲ ಸಂಪನ್ಮೂಲ ಇಲಾಖೆ.